ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ.

ಕರ್ನಾಟಕ ಲೋಕ ಸೇವಾ ಆಯೋಗದವರಿಂದ ನೇಮಕಾತಿ.

೧೪೬೦. ಶ್ರೀ ಕೆ. ಎಸ್. ಬೇಳಗಿ (ಬ್ಯಾಡಗಿ). —ಮಾನ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೦ ರಿಂದ ೧೯೮೫ರ ವರೆಗೆ ಕರ್ನಾಟಕ ಲೋಕ ಸೇವಾ ಆಯೋಗ, ನೇಮಕ ಮಾಡಿದ ವಿವಿಧ ದರ್ಜೆಯ ಹುದ್ದೆಗಳ ಸಂಖ್ಯೆ ಎಷ್ಟು ?

ಆ) ಅದರಲ್ಲಿ ಪರಿಶಿಷ್ಟ ಜಾತಿ ವರ್ಗಗಳ ಅಭ್ಯರ್ಥಿಗಳಿಗೆ ನೀಡಿದ ಸಂಖ್ಯೆ ಎಷ್ಟು ? ಮೊದಲನೇ ದರ್ಜೆಯಿಂದ ಬೇರೆ ಬೇರೆ ದರ್ಜೆಗಳಿಗೆ ಪಟ್ಟಿ ವಿವರ ನೀಡುವುದು ?

ಇ) ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳು ಪಟ್ಟಣದಿಂದ ಬಂದ ಅಭ್ಯರ್ಥಿಗಳೆಷ್ಟು ಹಾಗೂ ಹಳ್ಳಿಗಳಿಂದ ಬಂದ ಅಭ್ಯರ್ಥಿಗಳ ಸಂಖ್ಯೆ ಎಷ್ಟು ?

ಈ) ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಲ್ಲಿ ಹುದ್ದೆಗಳನ್ನು ಪಡೆದ ಬೇರೆ ಬೇರೆ ಜಾತಿಗಳ ಪಟ್ಟಿಯನ್ನೊದಗಿಸುವುದು.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧೯೮೦ ರಿಂದ ೧೯೮೫ರ ವರೆಗೆ ಕರ್ನಾಟಕ ಲೋಕ ಸೇವಾ ಆಯೋಗ ನೇಮಕ ಮಾಡಿದ ವಿವಿದ ದರ್ಜೆಯ ಹುದ್ದೆಗಳ ಸಂಖ್ಯೆ ಈ ಕೆಳಕಂಡಂತೆ ಇದೆ.

೧ನೇ ದರ್ಜೆ	೨ನೇ ದರ್ಜೆ	೩ನೇ ದರ್ಜೆ
೧೪೪೧	೩೪೩೮	೯೭೨೯

ಆ) ಪರಿಶಿಷ್ಟ ಜಾತಿ–ಪಂಗಡ ಅಭ್ಯರ್ಥಿಗಳಿಗೆ ವಿವಿಧ ದರ್ಜೆಯಲ್ಲಿ ನೀಡಿದ ಸಂಖ್ಯೆ ಈ ಕೆಳಕಂಡಂತೆ ಇದೆ.—

೧ನೇ ದರ್ಜೆ		೨ನೇ ದರ್ಜೆ		೩ನೇ ದರ್ಜೆ	
ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ
೨೮೦	೪೦	೪೪೧	೮೯	೧೬೭೫	೪೯೦

ಇ) ಈ ಮಾಹಿತಿ ಸಂಗ್ರಹಿಸುವುದು ಸಾಧ್ಯವಿಲ್ಲವಾಗಿದೆ.

ಈ)

ಲೋಕೋಪಯೋಗಿ ಇಲಾಖೆಯಲ್ಲಿ ತೆರವಾದ ಸ್ಥಾನಕ್ಕೆ ಮುಂಬಡ್ತಿ ನೀಡುವ ಬಗ್ಗೆ.

೧೪೬೨ ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಲೋಕೋಪಯೋಗಿ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಪ್ರಥಮ ದರ್ಜೆ ಗುಮಾಸ್ತರ ತೆರವಾದ ಹುದ್ದೆಗಳೆಷ್ಟು ?